**2ನೇ ಅಪರ ಸಿ.ಜೆ. ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಮದ್ದೂರು**

**ಸಿ.ಸಿ.ನಂ. 807/2014**

| | | |
|---|---|---|
| ಸಾಕ್ಷಿಯ ಹೆಸರು | :- | ಎಂ ಡಿ ತೇಜ್ ಪ್ರಕಾಶ್ |
| ತಂದೆ/ಗಂಡನ ಹೆಸರು | :- | ಲೇಟ್ ಎಂ ಕೆ ದೇವಯ್ಯ |
| ವಯಸ್ಸು | :- | 48 ವರ್ಷ |
| ಉದ್ಯೋಗ | :- | ಜೂನಿಯರ್ ಇಂಜಿನಿಯರ್ ಚೆಸ್ಕಾಂ |
| ವಾಸಸ್ಥಳ | :- | ಮಳವಳ್ಳಿ |

**(ಸಾಕ್ಷಿಗೆ ದಿನಾಂಕ: 19.03.2022 ರಂದು ಪ್ರಮಾಣ ವಚನ ಬೋಧಿಸಲಾಯಿತು)**

**ಸಿಡಬ್ಲ್ಯೂ 18 ಪಿಡಬ್ಲ್ಯೂ .4**

**ಮುಖ್ಯ ವಿಚಾರಣೆ:- ಮಾನ್ಯ ಸ ಸ ಅ ರವರಿಂದ:-**

ದಿ:01.04.2013 ರಂದು, ನಾನು Incharge Assistant Engineer ಆಗಿ ಚೆಸ್ಕಾಂ ನಲ್ಲಿ ಕೆಲಸ ಮಾಡುತ್ತಿದ್ದೆ. ನಮ್ಮ ಮದ್ದೂರು ಚೆಸ್ಕಾಂ ವಾಪ್ತಿಯಲ್ಲಿ ವಳಗೆರೆಹಳ್ಳಿ ಗ್ರಾಮದಿಂದ ಗೆಜ್ಜಲಗೆರೆ ಕಡೆಗೆ ಎಳೆಲಾಗಿದ್ದ ವಿದ್ಯುತ್ ಲೈನ್ ಗೆ, ವಿದ್ಯುತ್ ಸಪ್ಲೈ ಕೊಡಬೇಕಾಗಿತ್ತು. ನಾವು ಎಳೆದಿದ್ದಂತಹ ವೈರ್ ನ್ನು ಕಳ್ಳತನ ಮಾಡಿ, ಅದನ್ನು ನಾಶಮಾಡಿದ್ದರು. ಮತ್ತೇ ನಾವು ಹೊಸದಾಗಿ ಆ ವೈರ್ ನ್ನು ದಿ:01.04.2013 ರಂದು ಮಧ್ಯಾಹ್ನ 02-00 ಗಂಟೆಗೆ ಸುಮಾರಿಗೆ ಎಳೆಯಲು ಹೋದಾಗ, ಅಲ್ಲಿ ವಳಗೆರೆ ಹಳ್ಳಿ ಮತ್ತು ಅಕ್ಕಪಕ್ಕದ ಗ್ರಾಮದ ಜನರು ನಮಗೆ ಅಡ್ಡಿಪಡಿಸಿದರು. ಅಲ್ಲಿ ಪೊಲೀಸನವರು ಸಹ ಬಂದೋಬಸ್ತಿಗಾಗಿ ನಮ್ಮ ಜೊತೆ ಇದ್ದರು. ಅಲ್ಲಿದ್ದಂತಹ ಗ್ರಾಮಸ್ಥರು ಲೈನ್ ಎಳೆಯ ಬಾರದೆಂದು ಧರಣಿ ಮಾಡುತ್ತಿದ್ದರು. ಸದರಿ ಜಾಗ ಬೋರೆಗೌಡ ಇವರ ತೋಟದ ಮನೆಯ ನೇರ ಬಂಡಿ ದಾರಿಯಾಗಿತ್ತು.

2. ನಾವು ಅಲ್ಲಿಗೆ ಹೋದಾಗ ಸುಮಾರು 150 ಕ್ಕಿಂತ ಹೆಚ್ಚು ಜನರು ಸೇರಿದ್ದರು. ಅಲ್ಲಿದ್ದಂತಹ ಪೊಲೀಸ್ ಅಧಿಕಾರಿಗಳು ಹಾಗೂ ನಮ್ಮ ಅಧಿಕಾರಿಗಳು ಸಹ ಧರಣಿನಿರತ ಜನರಿಗೆ ಮನ ಹೊಲಿಸಲು ಪ್ರಯತ್ನ ಮಾಡಿದರು. ಸದರಿ ವಿದ್ಯುತ್ ಸಂಪರ್ಕದ ಲೈನ್ ನಿಂದ ಗೆಜ್ಜಲಗೆರೆ ಗ್ರಾಮದ ರೈತರಿಗೆ ಅನುಕೂಲವಾಗಿ ಹಾಗೂ

ವಳಗೆರೆಹಳ್ಳಿ ಗ್ರಾಮದ ಜನರಿಗೆ ಕುಡಿಯುವ ನೀರು ಮತ್ತು ವಿದ್ಯುತ್ ಮೋಟಾರ್ ಗಳಿಗೆ ವೋಲ್ಟೇಜ್ ಕಡಿಮೆಯಾಗಿ ತೊಂದರೆ ಉಂಟಾಗುತ್ತದೆ ಎಂದು ಅಲ್ಲಿದ್ದಂತಹ ಜನರು ನಮಗೆ ಅಡ್ಡಿಪಡಿಸಿದರು. ಆಗ ಐ ಪಿ ಸೆಟ್ ಗೂ ಮತ್ತು ಮನೆಯ ವಿದ್ಯುತ್ ಲೈನ್ ಗೂ ಒಂದೇ ಸಂಪರ್ಕ ಇತ್ತು. ಈಗ ನಿರಂತರ ಜ್ಯೋತಿ ಎಂಬ ಯೋಜನೆಯಡಿಯಲ್ಲಿ ಮನೆಗಳಿಗೆ ಪ್ರತ್ಯೇಕವಾದ ವಿದ್ಯುತ್ ಲೈನ್ ಇರುತ್ತದೆ. ಅಲ್ಲಿ ಪೊಲೀಸರು ಹಾಗೂ ನಮ್ಮ ಅಧಿಕಾರಿಗಳು ತಿಳುವಳಿಕೆ ನೀಡಿದ್ದರೂ ಸಹ ಆ ಗ್ರಾಮಸ್ಥರು ಹಠಮಾರಿ ಧೋರಣೆ ಮುಂದುವರೆಸಿದರು. ಅವರುಗಳಲ್ಲಿ ಇದ್ದಂತಹ ಕಿಡಿಗೇಡಿ ಜನರು ನಮ್ಮಗಳ ಮೇಲೆ ಕಲ್ಲುಗಳನ್ನು ಎಸೆದರು. ಈ ದಿನ ನ್ಯಾಯಾಲಯದ ಮುಂದೆಯಿರುವಂತಹ ಆರೋಪಿತರು ಸಹ ಇದ್ದರು.

ಮುದ್ದೆಮಾಲ್ ಗಳನ್ನು ಹಾಜರುಮಾಡಲು ಸಮಯ ಕೇಳಿದ್ದು, ಮುಂದುವರೆದ ಮುಖ್ಯವಿಚಾರಣೆಗೆ ಸಮಯ ನೀಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇ ಒ**

**(ಆದಿತ್ಯ ಆರ್ ಕಲಾಲ್)**
**2ನೇ ಅಪರ ಸಿವಿಲ್ ನ್ಯಾಯಾಧೀಶರು**
**ಮದ್ದೂರು.**